ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಚಿಪ್ಕುನಕಟ್ಟಿಯವರು ಈ ಇಲಾಖೆಯನ್ನು ನಿರ್ವಹಣೆ ಮಾಡಿದ್ದಾರೆ. ಹೊಸ ಸಿಬ್ಬಂದಿಯನ್ನು ಮಂಜೂರುಮಾಡಿಲ್ಲ. ಹಿಂದೆ ಡಿವಿಜನ್ ಸಬ್ ಡಿವಿಜನ್ ಎಂದು ಮಂಜೂರು ಮಾಡಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಇರತಕ್ಕಂಥ ಅಧಿಕಾರಿಗಳ ಸಂಖ್ಯೆಯನ್ನು ಹೇಳಿದೆ. ಈಗ ಆಗಿರುವಂಥ ಕೆಲಸಗಳಿಗೆ ಪೇಮೆಂಟ್ ಮಾಡಿದರೆ ಹಣ ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅರ್ಬಿಟ್ರೇಷನ್‌ನಲ್ಲಿ ವಿಶ್ವಬ್ಯಾಂಕ್ ನಾಮಿನಿ ಇರುತ್ತಾರೆ. ಕಂಟ್ರಾಕ್ಟರ್ ನಾಮಿನಿ ಇರುತ್ತಾರೆ. ಸರ್ಕಾರದ ನಾಮಿನಿ ಇರುತ್ತಾರೆ, ಈ ಮೂರು ಜನ ಸೇರಿ ನಿರ್ಣಯ ಕೊಟ್ಟಮೇಲೂ ಕೂಡ ಡಿಲೆ ಏತಕ್ಕೆ ? ಈ ರೀತಿಯಾದರೆ ಈ ಪ್ರಾಜೆಕ್ಟ್ ಮುಗಿಯುವುದು ಯಾವಾಗ ?

ಶ್ರೀ ಎಚ್. ಡಿ. ದೇವೇಗೌಡ.—ಈ ಸದನದಲ್ಲಿ ಅರ್ಬಿಟ್ರೇಷನ್ ಮೇಲೆ ದೊಡ್ಡ ಚರ್ಚೆಯಾಗಿದೆ. ಇದು ಬಹಳ ಮಹತ್ವದ ವಿಷಯ ಎನ್ನುವುದು ಸರ್ಕಾರದವರಿಗೆ ತಿಳಿದಿದೆ. ಅರ್ಬಿಟ್ರೇಷನ್ ವಿಷಯದಲ್ಲಿ ವಿಧಿನಿಯಮಗಳಿಗೆ ಅನುಸಾರವಾಗಿ ವಿಳಂಬ ಮಾಡದೇ ಆ ಭಾಗದ ಎಲ್ಲಾ ಶಾಸಕರನ್ನು ಕರೆಸಿ ವಿಚಾರ ಮಾಡುತ್ತೇನೆ.

ಕೇರಳ ರಾಜ್ಯಕ್ಕೆ ಸಿಮೆಂಟ್ ಪೂರೈಕೆ ಬಗ್ಗೆ

೧೦೫. ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕೇರಳ ರಾಜ್ಯಕ್ಕೆ ಸಿಮೆಂಟ್ ಸರಬರಾಜು ಮಾಡಲು ರಾಜ್ಯ ಸರ್ಕಾರದವರು ಒಪ್ಪಂದ ಮಾಡಿಕೊಂಡಿರುವರೆ.

(ಆ) ಹಾಗಿದ್ದಲ್ಲಿ ಈ ಒಪ್ಪಂದದ ಮೇರೆಗೆ ಕೇರಳ ರಾಜ್ಯಕ್ಕೆ ಪೂರೈಸಬೇಕಾದ ಸಿಮೆಂಟ್ ಪ್ರಮಾಣ ಅದರ ದರ ಮತ್ತು ಕಾಲಾವಧಿಯ ವಿವರಗಳೇನು.

(ಇ) ರಾಜ್ಯದಲ್ಲಿ ಸಿಮೆಂಟ್ ಬಳಕೆದಾರರಿಗೆ ಯಾವ ದರದಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ.

(ಈ) ಬಹಿರಂಗ ಮಾರುಕಟ್ಟೆಯಲ್ಲಿ ಸರಬರಾಜು ಮಾಡುತ್ತಿರುವ ಸಿಮೆಂಟ್‌ನ್ನು ಸರ್ಕಾರದವರು ಯಾವ ಬೆಲೆಯಲ್ಲಿ ಕೊಳ್ಳುತ್ತಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಯಿ (ಕೈಗಾರಿಕ ಮಂತ್ರಿಗಳು).—

(ಅ) ಇಲ್ಲ.

(ಆ) ಅ ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

(ಇ) ಭಾರತ ಸರ್ಕಾರದ ನೀತಿಯಂತೆ ಅನಿಯಂತ್ರಿತ ಸಿಮೆಂಟ್‌ನ್ನು ಕಾರ್ಖಾನೆಗಳು ಬಹಿರಂಗ ಮಾರುಕಟ್ಟೆಯಲ್ಲಿ ಯಾವರೀತಿ ಬೆಲೆಯ ಹಾಗೂ ವಿತರಣೆಯ ನಿಯಂತ್ರಣವಿಲ್ಲದೆ ಮಾರಾಟಮಾಡುತ್ತಿವೆ. ಸಿಮೆಂಟ್ ಕಾರ್ಖಾನೆಯವರು ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟವ ಸಿಮೆಂಟ್ ದರವನ್ನು ಒಂದು ಚೀಲಕ್ಕೆ ೬೮ ರೂ.ಗಳಿಂದ ೭೦ ರೂ.ಗಳವರೆಗೆ (ರೈಲಿನಲ್ಲಿ ಸರಬರಾಜು ಮಾಡಿದರೆ) ನಿಗದಿಪಡಿಸಿದ್ದಾರೆ. ಹಾಗೂ ಲಾರಿಯಲ್ಲಿ ಸಿಮೆಂಟ್‌ನ್ನು ಸರಬರಾಜು ಮಾಡಿದರೆ ಇದರ ಬೆಲೆ ೧ ಚೀಲಕ್ಕೆ ೩ ರೂ.ಗಳಿಂದ ೪ ರೂ. ಗಳವರೆಗೆ ಹೆಚ್ಚಿಗೆ ಆಗುತ್ತದೆ.

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇವರು ಆಮದಾದ ಸಿಮೆಂಟ್‌ನ್ನು ನಿಜ ಬಳಕೆದಾರರಿಗೆ ಒಂದು ಚೀಲಕ್ಕೆ ೫೫ ರೂ.ಗಳಂತೆ (ಸಾರಿಗೆ ವೆಚ್ಚ ಪ್ರತ್ಯೇಕ) ಮಂಗಳೂರು ಬಂದರಿನಲ್ಲಿ ಮಾರುತ್ತಿದ್ದಾರೆ.

(ಈ) ಸರ್ಕಾರವು ಬಹಿರಂಗ ಮಾರುಕಟ್ಟೆಯಲ್ಲಿ ಸಿಮೆಂಟ್‌ನ್ನು ಕೊಳ್ಳುತ್ತಿಲ್ಲ ಕೇಂದ್ರ ಸರ್ಕಾರವು ಕೊಡುವ ನಿಯಂತ್ರಿತ ಸಿಮೆಂಟ್‌ನ್ನು ಮಾತ್ರ ಸರ್ಕಾರಿ ಇಲಾಖೆಗಳಿಗೆ ಹಾಗೂ ಸಾರ್ವಜನಿಕರಿಗೆ ರಾಜ್ಯ ಸರ್ಕಾರವು ಹಂಚುವುದು,

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ (ಅ) ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ ಹಾಗೆಯೇ ನನ್ನ ''(ಅ) ಪ್ರಶ್ನೆಗೆ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ'' ಎಂದು ಹೇಳಿದ್ದಾರೆ. ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಅವರೇನಾದರೂ ಕೇರಳಕ್ಕೆ ಸಿಮೆಂಟ್ ಒದಗಿಸಿದ್ದಾರೆಯೇ ? ಒದಗಿಸಿದ್ದರೆ ಎಷ್ಟು ಪ್ರಮಾಣ ಒದಗಿಸಿದ್ದಾರೆ. ಎಷ್ಟು ಬೆಲೆಗೆ ಒದಗಿಸಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಲಿಕ್ಕೆ ಸಾಧ್ಯವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ನವರು ಆಮದು ಮಾಡಿದ ಸಿಮೆಂಟನ್ನು ಕೇರಳಕ್ಕೆ ಒದಗಿಸಿದ್ದಾರೆ. ಅವರ ಒಪ್ಪಂದದ ಪ್ರಕಾರ ಕೇರಳ ರಾಜ್ಯ ನಾಗರೀಕ ಸರಬರಾಜು ಮಂಡಲಿ ನಿಯಮದ ಸಂಸ್ಥೆಗೆ ಹೈಸೀಸ್ ಮೂಲಕ ೪ ಸಾವಿರ ಮೆಟ್ರಿಕ್ ಟನ್ ಸರಬರಾಜು ಮಾಡುವಂತೆ ಕೇಳಿದ್ದನ್ನು ಕೊಟ್ಟಿದ್ದಾರೆ. ಒಂದು ಮೆಟ್ರಿಕ್ ಟನ್‌ಗೆ ೭೦೦ ರೂಪಾಯಿ ಗಳ ಬೆಲೆಗೆ ಕೊಟ್ಟಿದ್ದಾರೆ.

ಶ್ರೀ ಪಿ. ರಾಂದೇವ್.—ಇವೊತ್ತು ಸಿಮೆಂಟ್ ಅಭಾವದಿಂದ ಜನರಿಗೆ ತುಂಬಾ ತೊಂದರೆ ಯಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೆ ? ತಾವು ೫೫ ರೂಪಾಯಿಗಳ ಪ್ರಕಾರ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ನವರು ಸರಬರಾಜು ಮಾಡುತ್ತಾರೆಂದು ತಿಳಿಸಿದಿರಿ. ಸಾಧಾರಣ ಮನೆಯ ರಿಪೇರಿ ಗಾಗಿ, ಸಣ್ಣ ಸಣ್ಣ ಮನೆಗಳನ್ನು ಕಟ್ಟುವುದಕ್ಕೆ ಹಲವಾರು ತಿಂಗಳುಗಳಿಂದ ಸಿಮೆಂಟ್‌ಗೋಸ್ಕರ ರಾಜ್ಯ ದಲ್ಲಿ ಜನರ ಕಾಯುತ್ತಿದ್ದಾರೆ. ತಾವು ೫೫ ರೂಪಾಯಿಗಳ ರೇಟ್ ಪ್ರಕಾರ ರಾಜ್ಯದಲ್ಲಿ ಜನರಿಗೆ ಸಿಮೆಂಟ್‌ನ್ನು ಒದಗಿಸುತ್ತೀರಾ ಎಂದು ಕೇಳುತ್ತೇವೆ. ಹಿಂದಿನ ಸರ್ಕಾರ ಇದ್ದಾಗ ಸಿಮೆಂಟ್‌ಗೋಸ್ಕರ ಜನರು ಕಣ್ಣೀರು ಹಾಕುತ್ತಿದ್ದರು. ಈಗಲೂ ಅದೇ ಪರಿಸ್ಥಿತಿ ಆಗಬಾರದೆಂ. ಎರಡು ಮೂರು ಚದರ ಮನೆಗಳನ್ನು ಕಟ್ಟುತಕ್ಕ ಬಡವರಿಗೆ ೮-೧೦ ತಿಂಗಳುಗಳಿಂದ ಸಿಮೆಂಟ್ ದೊರೆತಿಲ್ಲ. ಇವರ ಕಷ್ಟವನ್ನು ಹೇಗೆ ಪರಿಹಾರ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬಳಕೆದಾರರಿಗೆ ನಿಯಂತ್ರಣ ದರದಲ್ಲಿ ಸಿಮೆಂಟ್ ಕೊಡತಕ್ಕ ವವಸ್ಥೆ ಇದೆ. ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಬಂದಂತಹ ಸಿಮೆಂಟ್‌ನ್ನು ಬೆಂಗಳೂರು ನಗರದಲ್ಲಿ ಮತ್ತು ಜಿಲ್ಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಂಚುತ್ತಿದ್ದಾರೆ, ಆದರಲ್ಲೂ ಕಳೆದ ಒಂದುವರೆ ತಿಂಗಳು ಪವರ್ ಕಟ್ ಆದ್ದರಿಂದ ಸಿಮೆಂಟ್ ಸರಿಯಾಗಿ ಪೂರೈಕೆಯಾಗಿರಲಿಲ್ಲ. ಈಗ ಪುನಃ ಸಿಮೆಂಟ್ ಸಿಮೆಂಟ್ ಕಾರ್ಖಾನೆಗಳಿಗೆ ಹೆಚ್ಚು ಪವರ್ ಕೊಟ್ಟರಿಂವುದರಿಂದ ಕಳೆಗೆ ಮೂರು ದಿವಸ ಗಳಿಂದ ಸಿಮೆಂಟಾ ಕೊಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಈ ವಾರದಲ್ಲಿ ಸಿಮೆಂಟ್ ಸರಿಯಾಗಿ ಹಂಚಿತಕ್ಕ ವವಸ್ಥೆ ಮಾಡುತ್ತೇವೆ. ಇನ್ನು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್‌ನವರು ಏನಿದ್ದಾರ ಅವರು ಪತ್ರಿಕೆಗಳಲ್ಲಿ ಜಾಹಿರಾತು ಕೊಡುತ್ತಾರೆ. ಅವರಲ್ಲಿ ಯಾರು ಯಾರು ಹಣ ಕಟ್ಟುತ್ತಾರೆ. ಅವರಿಗೆ ಆ ರೇಟಿನಲ್ಲಿಯೇ ಕೊಡತಕ್ಕ ವ್ಯವಸ್ಥೆ ಇದೆ.

ಶ್ರೀ ಪಿ. ರಾಮದೇವ್.—ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್‌ನವರು ಕೇರಳಕ್ಕೆ ಒಂದು ಟನ್‌ಗೆ ೭೦೦ ರೂಪಾಯಿಗಳಂತೆ ಕೊಡುತ್ತಿದ್ದಾರೆ. ಇಲ್ಲಿ ಗ್ರಾಹಕರಿಗೆ ೧,೧೦೦ ರೂಪಾಯಿಗೆ ಕೊಡು ತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಖೋತಾ ಇದ್ದಾಗ ಕೇರಳಾದವರು ನಮಗೆ ವಿದ್ಯುಚ್ಛಕ್ತಿ ಯನ್ನು ಕೊಡಲಿಲ್ಲ. ಕೇರಳ ಸರ್ಕಾರಕ್ಕೆ ತಾವು ಯಾವ ಸ್ಪೆಷಲ್ ಕನ್‌ಸಿಡರ್ ಮೇಲೆ ಕಡಿಮೆ ದರದಲ್ಲಿ ಕೊಡುತ್ತಿದ್ದೀರಿ. ನಮಗೆ ಒಂದು ಟನ್‌ಗೆ ೧,೧೦೦ ರೂಪಾಯಿಗಳು, ಅವರಿಗೆ ೭೦೦ ರೂಪಾಯಿಗಳು ಈ ತಾರತಮ್ಯದ ಬೆಲೆ ಏತಕ್ಕೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವು ಕೊಡತಕ್ಕ ಬೆಲೆ ೭೦೦ ರೂಪಾಯಿಗಳು ಆದರೆ ಆಮದು ಸುಂಕ, ಹಡಗು ಸುಂಕ, ಸರಕು ಖಾಲಿ ಮಾಡುವ ವೆಚ್ಚ, ಆಕಸ್ಮಿಕ ವೆಚ್ಚಗಳು ಇವೆಲ್ಲವುಗಳನ್ನು ಅವರೇ ಭರಿಸಬೇಕು. ಇವೆಲ್ಲಾ ಖರ್ಚುಗಳನ್ನು ಸೇರಿಸಿದರೆ ೫೫ ರೂಪಾಯಿಗಿಂತಲೂ ಹೆಚ್ಚಾಗುತ್ತದೆ. ನಾವು ನಮ್ಮ ರಾಜ್ಯದಲ್ಲಿ ಏನು ಮಾರಾಟ ಮಾಡುತ್ತೇವೆ ಅದಕ್ಕಿಂತಲೂ ಹೆಚ್ಚಿಗೆ ಬೆಲೆ ಅವರಿಗೆ ಆಗುತ್ತದೆ.

ಶ್ರೀ ಪಿ. ರಾಮದೇವ್.—ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಯಾರಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ. ನೇರವಾಗಿ ಕೊರಿಯಾ ಸರ್ಕಾರದಿಂದ ಆಮದು ಮಾಡಿಕೊಳ್ಳತಕ್ಕ ವ್ಯವಸ್ಥೆ ಇದೆಯೇ ? ಅಥವಾ ಮಧ್ಯದಲ್ಲಿ ಬ್ರೋಕರ್ಸ್ ಮುಖಾಂತರ ಆಮದು ಮಾಡತಕ್ಕ ವ್ಯವಸ್ಥೆ ಇದೆಯೇ? ಬ್ರೋಕರ್ಸ್ ಮುಖಾಂತರ ಮಾಡುವುದು ಇದ್ದರೆ. ಅವರಿಗೆ ಸಿಕ್ಕತಕ್ಕ ಕಮಿಷಷನ್ ಏನು ? ಕೊರಿಯಾ ಸರ್ಕಾರ ಕೇವಲ ೩೦ ರೂಪಾಯಿಗೆ ಕೊಡುತ್ತಾರೆ ಇಲ್ಲಿ ೫೫ ರೂಪಾಯಿಗಳು ಮತ್ತು ಇತರೆ ಚಾರ್ಜ್ ಸೇರಿಸುವುದು, ಈ ವ್ಯತ್ಯಾಸದ ಹಣ ಯಾರು ಯಾರಿಗೆ ಹೋಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಲಿಕ್ಕೆ ಸಾಧ್ಯವೇ ?

ಶ್ರೀ ಎಸ್.ಆರ್. ಬೊಮ್ಮಾಯಿ.—ರಾಜ್ಯ ಸರ್ಕಾರ ಕೊರಿಯಾ ಸರ್ಕಾರದ ಮುಖಾಂತರ ನೇರವಾಗಿ ಒಪ್ಪಂದ ಮಾಡಿಕೊಂಡಿರುವುದು ಮಾರ್ಚಿ ೩೧ಕ್ಕೆ ಮುಕ್ತಾಯವಾಗುತ್ತದೆ ಒಪ್ಪಂದ ಪ್ರಕಾರ ಮ್ಯಾನುಫ್ಯಾಕ್ಚರರ್ಸ್‌ನಿಂದ ನೇರವಾಗಿ ಸಿಮೆಂಟನ್ನು ತರಿಸಲಾಗುತ್ತಿದೆ. ಇನ್ನು ಮಾನ್ಯ ಸದಸ್ಯರು ರೇಟಿನ ಬಗ್ಗೆ ಕೇಳುತ್ತಿದ್ದಾರೆ ಈವನ್ ಕ್ರೂಡ್ ಆಯಿಲ್ ಕೇಂದ್ರ ಸರ್ಕಾರದವರು ಖರೀದಿ ಮಾಡಿದಾಗ ಲೋಕಸಭೆಯಲ್ಲಿ ಕೆಲವೊಂದು ವಿಷಯಗಳನ್ನು ಇಂಟರ್‌ನ್ಯಾಷನಲ್ ಕನ್‌ವೆನ್‌ಷನ್ ಟ್ರೇಡ್ ಇಂಟರೆಸ್ಟ್ ಸಲುವಾಗಿ ಬಹಿರಂಗಗೊಳಿಸತಕ್ಕದ್ದು ಸರಿಯಲ್ಲವೆಂಬ ನೀತಿಯನ್ನು ಮಾಡಿಕೊಂಡು ಬಂದಿದ್ದಾರೆ. ಟ್ರೇಡ್ ಇಂಟರೆಸ್ಟ್ ಕನ್‌ವೆನ್‌ಷನ್ ಪ್ರಕಾರ ರೇಟ್ ಹೇಳುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲ. ಈ ಕಾರ್ಯಕ್ರಮ ಮಾರ್ಚಿ ೩೧ಕ್ಕೆ ಮುಗಿಯುತ್ತದೆ. ಹೊಸದಾಗಿ ಸರ್ಕಾರ ಬಂದಮೇಲೆ ಸಿಮೆಂಟ್ ಬಗ್ಗೆ ಇಡೀ ವಿಶ್ವದಲ್ಲಿ ಇರತಕ್ಕವರ ಬಗ್ಗೆ ಗ್ಲೋಬಲ್ ಟೆಂಡರ್ಸ್ ಕರೆದು ಯಾರದು ನಮಗೆ ಲಾಭದಾಯಕವಾಗಿರುತ್ತದೆ ಅದನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್ —ಕೊರಿಯಾ ಸಿಮೆಂಟ್ ಆಮದು ಮಾಡಿಕೊಂಡು ಕೇರಳಕ್ಕೆ ಕಳುಹಿಸಿದ್ದೀರಿ. ಹಾಗೆ ತಮಿಳುನಾಡು ಮತ್ತಿತರ ಕಡೆಗಳಿಂದ ಇಲ್ಲಿಗೆ ಬಂದು ಅದನ್ನು ಪಡೆದುಕೊಂಡು ಹೋಗಿದ್ದಾರೆ ಅದು ತಮಗೆ ಗೊತ್ತಿದೆಯೇ ? ನಿಗದಿಯಾಗಿ ೨೦೦ ಬ್ಯಾಗ್ ಮಾತ್ರ ತೆಗೆದುಕೊಂಡರೆ ಪರ್ಮಿಟ್ ಕೊಡುತ್ತೇವೆಂದು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್‌ನವರು ಮಾಡಿದ್ದರೆ ನಮ್ಮ ಸಾಮಾನ್ಯ ಜನರಿಗೆ ಕೊರಿಯಾ ಸಿಮೆಂಟ್ ಸಿಕ್ಕದೇ ಇರುವ ಪರಿಸ್ಥಿತಿ ಬರುತ್ತಿರಲಿಲ್ಲ. ಇವೊತ್ತು ಮದ್ರಾಸ್, ಕೇರಳಕ್ಕೆ ಕಳುಹಿಸುವುದನ್ನು ನಿಲ್ಲಿಸಿ, ನಮ್ಮ ರಾಜ್ಯದ ಜನಗಳಿಗೆ ಕಡಿಮೆ ಬೆಲೆಯಲ್ಲಿ ಸಿಮೆಂಟ್ ಒದಗಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆಮದು ಮಾಡತಕ್ಕ ಸಿಮೆಂಟ್ ಳ ಸಾವಿರ ಮೆಟ್ರಿಕ್ ಟನ್ ನವೆಂಬರ್ ತಿಂಗಳಲ್ಲಿ ಅವರಿಗೆ ಕೊಟ್ಟಿರುವುದು. ಅನಂತರ ೮೦ ಸಾವಿರ ಮೆಟ್ರಿಕ್ ಟನ್ ಬೇಕೆಂದು ಕೇರಳದವರು ಹಣ ತುಂಬಿದ್ದಾರೆ. ನಾವು ಬಂದಮೇಲೆ ಸಿಮೆಂಟ್ ಕೊಡಲಿಕ್ಕೆ ಆಗುವುದಿಲ್ಲ ಎಂದು ತಿಳಿಸಿದ್ದೇವೆ. ಮೊದಲ ಒಪ್ಪಂದದ ಪ್ರಕಾರ ಕೊಡಲಾಗಿದೆ. ಈಗ ಕೊಡಬಾರದೆಂದು ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ. —ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಮದೇವ್‌ರವರು ಕೇಳಿದ ಪ್ರಶ್ನೆಗೆ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್‌ನವರು ಒಂದು ಟನ್‌ಗೆ ೭೦೦ ರೂಪಾಯಿಗಳ ಪ್ರಕಾರ ಸಿಮೆಂಟನ್ನು ಕೇರಳಕ್ಕೆ ಮಾರಾಟ ಮಾಡುತ್ತಿದ್ದಾರೆನ್ನುವುದನ್ನು ಒಪ್ಪಿಕೊಂಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ೧,೦೦೦ ರೂಪಾಯಿಗಳು ಇದೆ. ಇಲ್ಲೂ ಒಂದು ಟನ್‌ಗೆ ೪೦೦ ರೂಪಾಯಿಗಳ ವ್ಯತ್ಯಾಸ ಬರುತ್ತದೆ. ಇಷ್ಟು ವ್ಯತ್ಯಾಸ ಏತಕ್ಕೆ ಎಂದು ಕೇಳಿದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದು ಸರಿಯಲ್ಲ. ಟ್ರಾನ್ಸ್‌ಪೋರ್ಟ್ ಕಾಸ್ಟ್, ಕೂಲಿ, ಅಮಾಲಿಗಳ ಫೀಜು, ಈ ರೀತಿಯ ಖರ್ಚು ಹೇಳಿದ್ದಾರೆ. ತಾವು ಕರ್ನಾಟಕ ರಾಜ್ಯಕ್ಕೆ ಸಿಮೆಂಟ್ ತರಿಸಿ, ಇಲ್ಲಿಂದ ನೀವು ಬೇರೆ ರಾಜ್ಯದ ಕಡೆಗೆ ಕಳುಹಿಸುತ್ತಿದ್ದೀರಿ. ತಾವು ಯಾವ ಕಾರಣಕ್ಕಾಗಿ ಕಳುಹಿಸುತ್ತಿದ್ದೀರಿ ? ಸಿಮೆಂಟಿನ ದರದ ಬಗ್ಗೆ ಟ್ರಾನ್ಸ್‌ಪೋರ್ಟೇಷನ್ ಕಾಸ್ಟ್, ಎಕ್ಸ್‌ಟ್ರಾ ಸೇರಿಕೊಳ್ಳುತ್ತದೆ, ಎಂದು ಹೇಳುತ್ತೀರಿ. ಇಲ್ಲಿ ೧,೦೦೦ ರೂಪಾಯಿಗೆ ಮಾರುವುದು ಇದ್ದರೆ, ತಾವು ಅವರಿಗೂ ಅಷ್ಟು ಹಣಕ್ಕೆ ಅಡ್ಜಸ್ಟ್ ಮಾಡುವುದಲ್ಲ. ಅವರಿಗೆ ಎಕ್ಸ್‌ಟ್ರಾ ಟ್ರಾನ್ಸ್‌ಪೋರ್ಟೇಷನ್ ಕಾಸ್ಟ್ ಸೇರಿದರೆ ಅದು ೧ ೨೦೦ ರೂಪಾಯಿಗಳಿಂದ ೧,೪೦೦ ರೂಪಾಯಿಗೆ ಮೇಲೆ ಹೋಗಬೇಕು. ಈಗ ಮಾನ್ಯ ಮಂತ್ರಿಗಳು ಕೊಡತಕ್ಕ ಕಾರಣ ಸರಿಯಲ್ಲ. ಬೇರೆ ಯಾವುದೋ ಕಾರಣ ಇರಬೇಕು ಅದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಇದನ್ನು ಅರ್ಥಮಾಡಿಕೊಳ್ಳಬೇಕು. ಕೇರಳದೊಂದಿಗೆ ಆಗ್ರಿಮೆಂಟ್ ಆದ ಪ್ರಕಾರ ಮಂಗಳೂರು ಬಂದರಿಗೆ ಎಷ್ಟು ಹಡಗುಗಳಲ್ಲಿ ಸಿಮೆಂಟ್ ಬರುತ್ತದೋ ಅಷ್ಟನ್ನೂ ತೆಗೆದುಕೊಂಡು ಕೇರಳಕ್ಕೆ ಕಳುಹಿಸಲಾಗುತ್ತದೆ. ಇದನ್ನು ಕಳುಹಿಸಬೇಕಾದರೆ ಈ ರೀತಿ ವೆಚ್ಚ ಬೀಳುತ್ತದೆ.

	Amount Rs.
Rate on Highsea sale basis	700-00
Customs Duty	70-00
Countervailing Duty	135-00
Port Dues	11-70
Clearing and forwarding charges	25-00
	941-70
Sales Tax	113-95
Contingencies	40-00
Total	1095-65
Rounded off to	1100-00

ಎಲ್ಲಾ ವೆಚ್ಚಗಳನ್ನೂ ಅವರೇ ಕೊಡುತ್ತಾರೆ. ಹಿಂದಿನ ಸರ್ಕಾರದವರು ೪೦೦೦ ಟನ್ ಕೊಡುವುದಕ್ಕೆ ಕಾರಣ ಎಂದರೆ ಆಗ ಸಾಕಷ್ಟು ಬೇಡಿಕೆ ಬರಲಿಲ್ಲವೆಂದು ಕೊಟ್ಟಿರುವುದಾಗಿ ನನಗೆ ತಿಳಿದುಬಂದಿದೆ. ನಾವು ಅಧಿಕಾರಕ್ಕೆ ಬಂದಮೇಲೆ ಅದನ್ನು ಕೇರಳದವರಿಗೆ ಕೊಡದೆ ನಮ್ಮಲ್ಲಿಯೇ ಸರ್ಕಾರದ ಕೆಲಸಗಳಿಗೆ ಅಂದರೆ ಅದು ಲೋಕೋಪಯೋಗಿ ಇಲಾಖೆಯ ಕಾಮಗಾರಿ ಇರಬಹುದು, ನೀರಾವರಿ ಇಲಾಖೆಯ ಕಾಮಗಾರಿ ಇರಬಹುದು, ಅಥವಾ ಬೇರೆ ಯಾವುದೇ ಕಾಮಗಾರಿ ಇರಬಹುದು ಅದಕ್ಕೆ ಉಪಯೋಗಿಸಿಕೊಳ್ಳಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಇದು ಮಾರ್ಚಿ ತಿಂಗಳಿಗೆ ಎಷ್ಟು ಬರುತ್ತದೋ ಅಷ್ಟು ಸಿಮೆಂಟನ್ನೂ ಸರ್ಕಾರಿ ಯೋಜನೆಗಳಿಗೆ ಕೊಡುತ್ತೇವೆ. ಖಾಸಗಿಯವರು ಯಾರು ದುಡ್ಡನ್ನು ತುಂಬಿದ್ದಾರೆ ಅವರಿಗೆ ಮುಂದಿನ ತಿಂಗಳು ಕೊಡುವ ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಖಾಸಗಿಯವರಿಗೆ ಕೊಡುವಂತೆ ಜನಸಾಮಾನ್ಯರಿಗೂ ಕಡಿಮೆ ಬೆಲೆಗೆ ಕೊಡುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆ ಸೂಕ್ತವಾದುದು. ಈಗ ಮಂಗಳೂರು ಬಂದರಿನಿಂದ ಕೊಡುತ್ತಿದ್ದೇವೆ. ಇನ್ನು ಮುಂದೆ ಈ ಸಿಮೆಂಟ್‌ನ್ನು ಗ್ರಾಮಾಂತರ ಪ್ರದೇಶಗಳಿಗೂ ಸಿಕ್ಕುವಂತೆ ವಿಭಾಗಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ವಿತರಣೆ ಮಾಡುವ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕಂಪೇಗೌಡ.—ಕೊರಿಯಾದಿಂದ ಬರತಕ್ಕ ಸಿಮೆಂಟ್‌ನ್ನು ಏಜೆಂಟ್ ಮುಖಾಂತರ ಆಮದು ಮಾಡಿಕೊಳ್ಳುತ್ತಿದ್ದೀರೋ ಅಥವಾ ಸರ್ಕಾರದ ಮುಖಾಂತರ ಮಾಡಿಕೊಳ್ಳುತ್ತಿದ್ದೀರೋ?

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವೇ ನೇರವಾಗಿ ಆಮದು ಮಾಡಿಕೊಳ್ಳುತ್ತಿದ್ದೇವೆ.